# ಬಿದ್ದರೂ ಮತ್ತೆ ಎದ್ದು ನಿಂತೆ...

ದ್ವಿತೀಯ ಪಿಯುಸಿಯನ್ನು ಹೊನ್ನಾವರದಲ್ಲಿ ಮುಗಿಸಿ ಹೊಸದನ್ನು ಕಲಿಯುವ ಉತ್ಸಾಹದಲ್ಲಿ ಉಡುಪಿಯ ಕಾಲೇಜಿನಲ್ಲಿ ಪತ್ರಿಕೋದ್ಯಮಕ್ಕೆ ಸೇರಿಕೊಂಡೆ. ಹೊಸ ಜಾಗ, ಹೊಸ ಜನ... ಎಲ್ಲವೂ ನನಗೆ ಹೊಸ ಅನುಭವವಾಗಿತ್ತು. ಆದರೆ ಒಂದು ದಿನ ಏಕಾಏಕಿ ಸಂಭವಿಸಿದ ಅಪಘಾತ ನನ್ನ ಜೀವನವನ್ನೇ ಬದಲಿಸಿತು.

ಕಣ್ಣು ತೆರೆದು ನೋಡಿದಾಗ ನಾನು ಮಣಿಪಾಲದ ದೊಡ್ಡ ಆಸ್ಪತ್ರೆಯಲ್ಲಿದ್ದೆ. ಮುಖವೆಲ್ಲಾ ರಕ್ತಮಯ. ದವಡೆ ಒಡೆದು ಹಲ್ಲುಗಳು ಮುರಿದಿದ್ದವು. ಅನೇಕ ಶಸ್ತ್ರಚಿಕಿತ್ಸೆಗಳು, ಹೊಲಿಗೆಗಳು, ಚುಚ್ಚುಮದ್ದುಗಳು ಮತ್ತು ನೋವಿನ ದಿನಗಳನ್ನು ಎದುರಿಸಬೇಕಾಯಿತು. ದೇಹದ ನೋವಿಗಿಂತ ಮನಸ್ಸಿನ ನೋವೇ ಹೆಚ್ಚು ಕಾಡುತಿತ್ತು.

ಕನ್ನಡಿಯ ಮುಂದೆ ನಿಲ್ಲಲು ಕೂಡ ಕೆಲವೊಮ್ಮೆ ಹೆದರಿಕೆ ಆಗುತ್ತಿತ್ತು. ಆದರೆ ಕುಟುಂಬ, ಉಪನ್ಯಾಸಕರು ಮತ್ತು ಸ್ನೇಹಿತರ ಬೆಂಬಲ ನನಗೆ ಮತ್ತೆ ಧೈರ್ಯವನ್ನು ನೀಡಿತು. ನಿಧಾನವಾಗಿ ಮಾತನಾಡಲು, ನಗಲು ಮತ್ತು ಜನರನ್ನು ಎದುರಿಸಲು ಕಲಿತೆ. ಆ ಘಟನೆ ನನ್ನೊಳಗಿನ ಹಟವನ್ನು ಜಾಗೃತಗೊಳಿಸಿತು. ನಾನು ಏನಾದರೂ ಸಾಧಿಸಲೇಬೇಕು ಎಂಬ ಸಂಕಲ್ಪ ಮೂಡಿತು. ಆಗ ನಡೆದಿದ್ದನ್ನೆಲ್ಲಾ ದುಃಖವಾಗಿ ನೆನೆಸಿಕೊಳ್ಳುವುದಕ್ಕಿಂತ ಅದನ್ನು ಎದುರಿಸುವ ಧೈರ್ಯವನ್ನು ನಾನು ನನ್ನೊಳಗೆ ಬೆಳೆಸಿಕೊಂಡೆ.



ಜೀವನ ನನ್ನನ್ನು ಎಷ್ಟು ಪರೀಕ್ಷಿಸಿದರೂ ನಾನು ಹಿಂದೆ ಸರಿಯಬಾರದು ಎಂದು ನಿರ್ಧರಿಸಿಕೊಂಡೆ. ಅದಕ್ಕಾಗಿ ನಾನು ಹೊಸ ಹೊಸ ಕಲಿಕೆಯಲ್ಲಿ ತೊಡಗಿಕೊಂಡು ಪತ್ರಿಕೋದ್ಯಮದಲ್ಲಿ ಇಂಟರ್ನ್‌ಶಿಪ್ ಮಾಡಿ ಹಲವು ಕೌಶಲಗಳನ್ನು ಕಲಿತೆ. ಆಗುವುದೆಲ್ಲವೂ ಒಳ್ಳೆಯದಕ್ಕೆ ಎಂಬ ನಂಬಿಕೆಯನ್ನು ಮನಸಿನಲ್ಲಿ ಇಟ್ಟುಕೊಂಡು ಎದುರಾದ ಎಲ್ಲ ಸಮಸ್ಯೆಗಳನ್ನು ಎದುರಿಸಿದೆ.

ಈ ಎಲ್ಲಾ ಅನುಭವಗಳು ನನ್ನೊಳಗೆ ದೊಡ್ಡ ಬದಲಾವಣೆಯನ್ನು ತಂದವು. ಒಮ್ಮೆ ನೋವಿನಿಂದ ಮೌನವಾಗಿದ್ದ ನಾನು, ಇಂದು ಜೀವನದ ಕಷ್ಟಗಳನ್ನು ಎದುರಿಸಲು ಕಲಿತ ವ್ಯಕ್ತಿಯಾಗಿದ್ದೇನೆ. ಕಷ್ಟದ ದಿನಗಳನ್ನು ಜೀವನದ ಸೋಲಾಗಿ ನೋಡದೆ, ಒಂದು ಪಾಠವಾಗಿ ಸ್ವೀಕರಿಸುವುದನ್ನು ಕಲಿಸಿವೆ. ಅಂದು ಜೀವನ ನನ್ನನ್ನು ನೆಲಕ್ಕುರುಳಿಸಿದ ದಿನವೇ ಮತ್ತೆ ಎದ್ದು ನಿಲ್ಲುವ ಶಕ್ತಿಯೂ ನನ್ನೊಳಗೆ ಹುಟ್ಟಿದ ದಿನವಾಗಿತ್ತು.

—ಕೆ.ಎಂ. ಪವಿತ್ರಾ

# ಆಗುವುದೆಲ್ಲಾ ಒಳ್ಳೆಯದಕ್ಕೆ

ಸುಮಾರು ನಾಲ್ಕು ದಶಕಗಳ ಹಿಂದೆ ಹೆಣ್ಣುಮಕ್ಕಳ ಉನ್ನತ ಅಭ್ಯಾಸ ಅಪರೂಪದ ಸಂಗತಿಯಾಗಿತ್ತು. ಆಗ ಅವಕಾಶಗಳಿಗಿಂತ ಅಡೆತಡೆಗಳೇ ಹೆಚ್ಚಾಗಿದ್ದವು. ಸರ್ಕಾರಿ ಉದ್ಯೋಗಿಯಾಗಿದ್ದ ನನ್ನ ತಂದೆ ಶಿಕ್ಷಣದ ಮಹತವನ್ನು ಆಳವಾಗಿ ಅರಿತವರು. ಹೀಗಾಗಿ ಹೆಣ್ಣುಮಕ್ಕಳಿಗೂ ವಿದ್ಯೆ ನಿಜವಾದ ಆಸ್ತಿ ಎಂಬ ಅವರ ನಂಬಿಕೆ ನನ್ನ ಬದುಕಿನ ಬುನಾದಿಯಾಯಿತ್ತು.

ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪೂರ್ಣಗೊಳಿಸಿದ ನಂತರ ತಂದೆಗೆ ನೆರವಾಗಬೇಕೆಂಬ ಉತ್ಸಾಹದಿಂದ ಉದ್ಯೋಗದ ಹುಡುಕಾಟ ಆರಂಭಿಸಿದೆ. ಶೀಘ್ರವೇ ಒಂದು ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಆಯ್ಕೆಯೂ ಆದೆ. ತಿಂಗಳಿಗೆ 300 ರೂಪಾಯಿ ಸಂಬಳ!. ತಂದೆ ಬಂಧುಮಿತ್ರರಿಗೆ ಸಿಹಿ ಹಂಚಿದ ಆ ದಿನ ನನ್ನ ಮೊದಲ ಸಾಧನೆಯ ಸಿಹಿ ನೆನಪು.

ಆದರೆ ನೇಮಕಾತಿ ಪತ್ರ ಕೈ ಸೇರುವ ಮುನ್ನವೇ ಅನಿರೀಕ್ಷಿತ ತಿರುವು ಎದುರಾಗಿತ್ತು. ಪ್ರಭಾವಿ ವ್ಯಕ್ತಿಯ ಹಸ್ತಕ್ಷೇಪದಿಂದ ಆ ಹುದ್ದೆ ಮತ್ತೊಬ್ಬರ ಪಾಲಾಯಿತು. ಕ್ಷಣ ಮಾತ್ರದಲ್ಲಿ ಕನಸುಗಳು ಕುಸಿದವು. ಮನಸಿಗೆ ಅದು ಭಾರೀ ಆಘಾತವಾಗಿತ್ತು. ಬದುಕು ಶೂನ್ಯವೆನಿಸಿತ್ತು. ಆ ಸಂಕಟದ ಸಮಯದಲ್ಲಿ ನನ್ನ ತಂದೆ ಮತ್ತು ಸೋದರ ಮಾವನವರು ನನಗೆ ಸಾಂತ್ವನ ಹೇಳಿದರು.

ಸಂಭವಿಸಿದ ಘಟನೆಗೆ ಬೇಸರಿಸುವುದಕ್ಕಿಂತ ಅದರ ಹಿಂದೆ ಇರುವ ಅರ್ಥವನ್ನು ಹುಡುಕಬೇಕೆಂಬ ಮನೋಭಾವ ನನ್ನೊಳಗೆ ಬೆಳೆಯಿತು. ಕೆಲವೇ ತಿಂಗಳಲ್ಲಿ ಹಿರಿಯರು ನಿಶ್ಚಯಿಸಿದಂತೆ ಕಾಲೇಜು ಉಪನ್ಯಾಸಕರೊಂದಿಗೆ ನನ್ನ ವಿವಾಹವಾಯಿತು. ಯಜಮಾನರ ಪ್ರೋತ್ಸಾಹದಿಂದ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದೆ. ಫಲಿತಾಂಶ ಪ್ರಕಟವಾದ 15 ದಿನಗಳಲ್ಲಿ ನಾವು ವಾಸಿಸುತ್ತಿದ್ದ ಊರಿನಲ್ಲಿಯೇ ಕಾಲೇಜು ಉಪನ್ಯಾಸಕಿಯಾಗಿ ನೇಮಕಗೊಂಡೆ. ಆ ದಿನ ನನಗೆ ಸ್ಪಷ್ಟವಾಯಿತು— ಕಳೆದುಹೋದ ಮೊದಲ ಅವಕಾಶವೇ ನನ್ನ ಬದುಕಿನ ದಿಕ್ಕು ತಿರುಗಿಸಿತು. ಮೂವತ್ತೈದು ವರ್ಷಗಳ ಉತ್ಸಾಹಭರಿತ ಸೇವೆ, ಅನೇಕ ವಿದ್ಯಾರ್ಥಿಗಳ ಜೀವನದಲ್ಲಿ ಬೆಳಕು ನೀಡಿದ ಸಂತೋಷ, ಗೌರವಪೂರ್ಣ ನಿವೃತ್ತಿ, ಸುಶಿಕ್ಷಿತ ಮಕ್ಕಳು— ಇವನ್ನು ನೆನಪಿಸಿಕೊಂಡಾಗ ಮನಸ್ಸು ಕೃತಜ್ಞತೆಯಿಂದ ತುಂಬಿಬರುತ್ತದೆ. ಜೀವನದಲ್ಲಿ ಕೆಲವು ಪರೀಕ್ಷೆಗಳು ಎದುರಾಗುವುದೇ ಒಳ್ಳೆಯ ಕಾರಣಕ್ಕೆ ಎಂದು ಅನ್ನಿಸುತ್ತದೆ.

—ಸಾವಿತ್ರಿ ಮುದುಗಲ್, ಹುಬ್ಬಳ್ಳಿ



## ನಮ್ಮ ಸುತ್ತಲಿನ ಸಾಧಕಿಯರು

ನಮ್ಮ ಸುತ್ತಮುತ್ತಲೂ, ಹಲವಾರು ಅಡೆತಡೆಗಳನ್ನು ದಾಟಿ, ತಮ್ಮ ಕ್ಷೇತ್ರಗಳಲ್ಲಿ ಗೆಲುವು ಪಡೆದಿರುವ ಯಶಸ್ವಿನಿಯರು ಇರುತ್ತಾರೆ. ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಸಾಧಕಿಯರು ನಿಮ್ಮ ಸುತ್ತಲಿದ್ದರೆ ಸಣ್ಣದೊಂದು ಪರಿಚಯ ಬರೆದು ಕಳುಹಿಸಿ. ಅವರ ಸಂಘರ್ಷ, ಉಳಿದವರಿಗೆ ಸ್ಫೂರ್ತಿಯಾಗಬಹುದು. ಪ್ರೇರಣೆ ನೀಡುವಂಥ ಸಾಧಕಿಯರನ್ನು ಪರಿಚಯಿಸಿದರೆ ಆಯ್ದ ಕೆಲವನ್ನು ಪ್ರಕಟಿಸಲಾಗುವುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 2. ಇಮೇಲ್–**editorsu@sudha.co.in**

